# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ110/2017**
**ಪಿ.ಡಬ್ಲ್ಯೂಃ1, ಶಿವಲೀಲಾ**

ದಿನಾಂಕ : **05-12-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಮುಂದುವರೆದ ಪಾಟಿ ಸವಾಲು :- ಶ್ರೀಮತಿ ಎಮ್ ವಿ ಎಲ್ ವಕೀಲರಿಂದ

ದಾವಾ ಸ್ವತ್ತಿನ ಬಗ್ಗೆ ಪಹಣಿಗಳನ್ನು ನೋಡಿರುತ್ತೇನೆ. 2003 ರಿಂದ ಅಪ್ಪಾಸಾಹೇಬ ಇವರ ಹೆಸರಿನಲ್ಲಿ ಪಹಣಿ ಪತ್ರಿಕೆ ಬರುತ್ತಿದೆ. ದಾವಾ ಸ್ವತ್ತಿನ ಪಹಣಿ ಅಪ್ಪಾಸಾಹೇಬ ಇವರ ಹೆಸರಿಗೆ ಬಂದ ವಿಚಾರ ಗೊತ್ತಾದ ಮೇಲೆ ಅದನ್ನು ಪ್ರಶ್ನೇ ಮಾಡಿಧೀರಾ ಎಂದು ಕೇಳಿದಕೆ ಸಾಕ್ಷಿ ದಾವಾ ಹಾಕಿದ ನಂತರ ಗೊತ್ತಾಯಿತ್ತು ಎಂದು ಹೇಳುತ್ತಾರೆ. ನಾನು ಈಗಲೂ ನನ್ನ ತಂದೆ ತಾಯಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೇನೆ ನಮ್ಮ ಸಂಬಂಧ ಚೆನ್ನಾಗಿ ಇದೆ. ಸದರಿ ನಿಪಿ-1 ವಿಲ್ಲ ಇದನ್ನು ಎಸ್ ಟಿ ಪಾಟೀಲ ಇವರು ತಯಾರು ಮಾಡಿರುತ್ತಾರೆ. ಅದನ್ನು ಏಲ್ಲಿ ಬೆರಳಚ್ಚು ಮಾಡಿಸಿದ್ದಾರೆ ಎಂದು ಗೋತ್ತಿಲ್ಲ ನಾನು ಆ ಸಮಯದಲ್ಲಿ ಇರಲಿಲ್ಲ.

ಅಪ್ಪಾಸಾಹೇಬ ಇವರಿಗೆ ಕನ್ಯಾ ನೊಡುವ ಸಮಯದಲ್ಲಿ ನಾನು ಹೋಗಿದ್ದೆ. ಆ ಸಮಯದಲ್ಲಿ ಕಾಳಗಿಯಲ್ಲಿ ದಾವಾ ಸ್ವತ್ತು ಅಪ್ಪಾಸಾಹೇಬ ಇವರ ಹೆಸರಿಗೆ ಇದೆ ಎಂದು ಕನ್ಯಾಯವರ ತಂದೆಗೆ ಹೇಳಿದ್ದೇವು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆ ರೀತಿ ಆಸ್ತಿ ಇದೆ ಎಂದು ಹೇಳಿದ್ದಕ್ಕೆ ನನ್ನ ತಮ್ಮ ಅಪ್ಪಾಸಾಹೇಬನಿಗೆ 1 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಡಲು ಒಪ್ಪಿದ್ದರು ಎಂದರೆ ಸಾಕ್ಷಿ ಆ ರೀತಿ ಹೇಳಿಲ್ಲ ಎಂದು ಹೇಳುತ್ತಾರೆ. ಗುಂಡಮ್ಮ ಇವರು ದಿನಾಂಕ 21-07-1997 ರಲ್ಲಿ ನನ್ನ ಹೆಸರಿಗೆ ನಿಪಿ-1 ರಂತೆ ವಿಲ್ಲ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ಲನ್ನು ನಾನು ಮತ್ತು ನನ್ನ ತಂದೆ ಸೇರಿ ಸೃಷ್ಟಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಗುಂಡಮ್ಮ ಜೀವಂತ ಇರುವವರೆಗೂ ಅವರೇ ಉಳುಮೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಿ. 2003 ರಿಂದ ಅಪ್ಪಾಸಾಹೇಬ ಇವರು ಉಳುಮೆ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ಗುಂಡಮ್ಮ ತವರು ತಾವೇ ಸ್ವತಹ ತಮ್ಮ ಮಕ್ಕಳಾದ ಪ್ರತಿವಾದಿಗಳನ್ನು ಕರೆದುಕೊಂಡು ಹೋಗಿ ಅಪ್ಪಾಸಾಹೇಬನ ಹೆಸರಿಗೆ ದಾವಾ ಸ್ವತ್ತು ಮಾಡಿಕೊಂಡಿದ್ದಾರೆ ಎಂದು ಸೂಚಿಸುವುದು ಸುಳ್ಳು ಎಂದು ಹೇಳುತ್ತಾರೆ. ನನ್ನ ಪ್ರಮಾಣ ಪತ್ರದ ಪ್ಯಾರ ನಂಬರ-6 ಮತ್ತು 7 ನೇ ಪ್ಯಾರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ110/2017**
**ಪಿ.ಡಬ್ಲ್ಯೂಃ1, ಶಿವಲೀಲಾ**

ಅಪ್ಪಾಸಾಹೇಬ ಸತ್ತ ನಂತರ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತು ದಾಖಲೆ ಆಗಿದೆ ಎಂದು ಸೂಚಿಸುವುದು ಸರಿಯಲ್ಲ. ಅಪ್ಪಾಸಾಹೇಬ ತೀರಿಕೊಂಡ ನಂತರ ಇವತ್ತಿನವರೆಗೂ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸುಳ್ಳು ನಾನು ಇದ್ದೇನೆ ಎಂದು ಹೇಳುತ್ತಾರೆ. ನಾನು ಪ್ಯಾರ 10 ರಲ್ಲಿ ಹೇಳಿರುವಂತೆ ದಿನಾಂಕ 27-10-2017 ರಂದು 1 ನೇ ಪ್ರತಿವಾದಿ ತಹಸೀಲ್ದಾರವರು ಮಾಡಿದ ಆದೇಶದ ಆಧಾರ ಮೇಲೆ ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಲು ನನ್ನ ಮಾಲಿಕತ್ವವನ್ನು ನಿರಾಕರಿಸಿ ಜಮೀನಿಂದ ಹೊರಗೆ ಹಾಕಲು ಬೆದರಿಕೆ ಹಾಕಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪ್ಪಾಸಾಹೇಬ ಸತ್ತ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಜಮೀನು ಆದ ಮೇಲೆ ಈ ರೀತಿಯ ಸುಳ್ಳು ದಾವೆ ಹಾಕಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಂದು ಕಬ್ಜೆಯಲ್ಲಿ ಇದ್ದರು ಸಹ ನಾನು ನನ್ನ ತಂದೆ ಸೇರಿ ಈ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ